ಬಿ. ಚಂದ್ರೇಗೌಡ, ಬೆಂಗಳೂರು

ಮರದಿಂದ ಮನುಷ್ಯನು ಕಲಿಯಬೇಕಾದ ಪಾಠ ಯಾವುದು?



ತಾನು ದೃಢವಾಗಿ ನಿಂತು ಪುಟ್ಟ ಜೀವಿಗಳಿಗೆ ಗೂಡು ಕಟ್ಟಲು ಅವಕಾಶ ಮಾಡಿಕೊಡುವುದು.

ಸಿ.ಕೆ. ಗಣಪ್ಪನವರ, ಮುಂಡರಗಿ

ಎಲ್ಲ ಪಕ್ಷದವರೂ ಪಾರದರ್ಶಕ ಆಡಳಿತ ಎನ್ನುತ್ತಾರೆ. ಹಗರಣಗಳೇ ತುಂಬಿರುತ್ತವಲ್ಲ?

ಪಾರದರ್ಶಕ ಎಂದರೆ ಪಾ–ಪಾಪಿಗಳ; ರ–ರಕ್ತವದನ(ಜಿಗಣೆ)ರ ದರ್ಶಕ ಎಂದರ್ಥವಂತೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಕರ್ಮ ಹುಚ್ಚುನಾಯಿ ಇದ್ದಂತೆ. ಪಾಪ?

ಹುಚ್ಚುನಾಯಿಯನ್ನು ಹಿಡಿಯಲು ಬರುವ ಕಾರ್ಪೊರೇಷನ್ ಲಾರಿ.

ವಿ. ಹೇಮಂತಕುಮಾರ್, ಬೆಂಗಳೂರು

ಯೋಗ ದಿನಾಚರಣೆಯ ದಿನ ಯೋಗ ಮಾಡ್ತಾರೆ. ಮಕ್ಕಳ ದಿನಾಚರಣೆಯ ದಿನ?



ಮಕ್ಕಳೊಡನೆ ಮಕ್ಕಳಂತಿರಲು ಮನಸ್ಸು ಮಾಡ್ತಾರೆ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ

ಕೊಟ್ಟ ಹೇಳಿಕೆಯನ್ನು ಹೇಳಿಲ್ಲವೆಂದು ಉಲ್ಟಾ ಹೊಡೆಯುವುದು ರಾಜಕಾರಣಿಗಳ ಜಾಯಮಾನವೆ?

ಅದು ಯಾವುದೇ ಮಾನವಿಲ್ಲದ ವ್ಯಕ್ತಿಯ joy.

ಪಿ.ಎನ್. ಶ್ರೀವತ್ಸ, ಬೆಂಗಳೂರು

ಇತ್ತೀಚೆಗೆ ಸಿಂಗಪುರಕ್ಕೆ ಭೇಟಿ ನೀಡಿದಾಗ ಬೀದಿನಾಯಿಗಳೇ ಕಣ್ಣಿಗೆ ಬೀಳಲಿಲ್ಲವಲ್ಲಾ?

ಎಂಥ ಹುಚ್ಚು ನಿಮ್ಮದು! ಕಾಲುಕಾಲಿಗೆ ಸಿಗುವುದನ್ನು ಕಾಣಲು ಫ್ಲೈಟ್ ಖರ್ಚನ್ನು ದಂಡ ಮಾಡಿದಿರಲ್ಲಾ!

ವಿಜಯಕುಮಾರಿ ಧನ್ಯನಾದನ್, ಚೆನ್ನೈ

ಆಂಗ್ಲಭಾಷೆಯನ್ನು ಸೇರಿಸದೆ ಸ್ವಚ್ಛ ಕನ್ನಡವನ್ನು ಮಾತಾಡಲು ಆಗುವುದಿಲ್ಲ. ಏಕೆ?

ಅಭ್ಯಾಸಬಲ. ಡಾಲ್ಡಾ ಅಭ್ಯಾಸವಾದವರಿಗೆ ಹಸುವಿನ ತುಪ್ಪ ರುಚಿಸದು.

ಬಿ.ಆರ್. ಉಷಾ, ಬೆಂಗಳೂರು

ಹುಡುಗರು ಮಚ್ಚ ಅಂತಾರಲ್ಲ, ಏನದರ ಅರ್ಥ?

ಮಚ್ಚಿನಂತೆಯೇ ಆಗಾಗ್ಗೆ ಸಾಣೆ ಹಿಡಿಯದಿದ್ದರೆ ಮೊಂಡು ಆಗಿಬಿಡುವರೆಂದು.

ಜೀವಿ, ಗೊಂಡೇದಹಳ್ಳಿ

ಕೆಲವರು ಹೋಟೆಲ್ ಮುಂದೆ ನಿಂತಿದ್ದರೂ ಕಾರಿನ ಒಳಕ್ಕೆ ತಿಂಡಿ ತರಿಸಿಕೊಳ್ಳುವರಲ್ಲ?

ಮಾಡುವ ಸ್ಥಳ, ರೀತಿ ಕಣ್ಣಿಗೆ ಬಿದ್ದರೆ ತಿನ್ನಲು ಮನಸ್ಸು ಬಾರದಂತೆ.

ವಸುಧಾ ಜೈಶಂಕರ್, ಬೆಂಗಳೂರು

ಚೇಳಿಗೆ ಪಾರುಪತ್ಯ ಕೊಟ್ಟರೆ ಜಾವಕ್ಕೊಮ್ಮೆ ಕುಟುಕು. ಅವಿವೇಕಿ ರಾಜಕಾರಣಿಗೆ ಅಧಿಕಾರ ಕೊಟ್ಟರೆ?

ಅವನನ್ನು ಬೆಂಬಲಿಸಿದ ಪಕ್ಷದ ಭವಿಷ್ಯವೇ ಮೊಟಕು.

ಜಯತೀರ್ಥ ಶ್ರೀಪತಿ, ಹುಬ್ಬಳ್ಳಿ

ಇಂದಿನ ಎಲ್ಲಾ ಕೆಟ್ಟ ಸುದ್ದಿಗಳು ಮಾಧ್ಯಮಗಳಲ್ಲಿ 'ವೈರಲ್ ಆಗಿದೆ' ಎನ್ನುತ್ತಾರೆ. ಏಕೆ?

ಅವು ವೈರಲ್ ಫೀವರ್‌ನಂತೆ ಮೂರು ದಿನ ಕಾಡಿ ಮಾಯವಾಗುವ ಸುದ್ದಿಗಳಾದ್ದರಿಂದ.

ಪಿ. ಜಯವಂತ ಪೈ, ಕುಂದಾಪುರ

ಹೋರಾಟಕ್ಕೂ, ಹಾರಾಟಕ್ಕೂ ವ್ಯತ್ಯಾಸವೇನು?

ಮದುವೆಯೇ; ಮದುವೆಗೆ ಮುಂಚೆ ಹಾರಾಟ; ನಂತರ ಹೋರಾಟ.

ರತ್ನಜ, ಮೈಸೂರು

ಪುರೋಹಿತಶಾಹಿ ಎಂದು ಬೊಬ್ಬೆ ಹೊಡೆಯುತ್ತಾರಲ್ಲ, ಹಾಗೆಂದರೇನು ರಾಮ್?

ಅದು ಹಳೆಯ ವಸ್ತುಗಳ ವಾಸನೆಯ ಅಲರ್ಜಿಯಿಂದ ಉಂಟಾಗುವ ಕೂಗು.

## ಬಹುಮಾನಿತ ಪ್ರಶ್ನೆ

ವಿಜಯಕುಮಾರ್ ಎಚ್.ಕೆ.

ಐಎಎಸ್ ಪಾಸಾದವನು ಎಸ್ಸೆಸ್ಸೆಲ್ಸಿ ಫೇಲಾದ ಮಂತ್ರಿಯ ಆದೇಶ ಪಾಲಿಸುವುದು ಸರಿಯೋ, ತಪ್ಪೋ?

ಐಎಎಸ್‌ನ ಭವಿಷ್ಯದ ಬಾಬ್ತಿನಲ್ಲಿ ಸರಿ, ದೇಶದ ಭವಿಷ್ಯದ ಬಾಬ್ತಿನಲ್ಲಿ ತಪ್ಪು.

ಜಯಲಕ್ಷ್ಮಿ ಉಪಾಧ್ಯಾಯ, ಕಂಚಾರ್ತಿ

ಹಿಂದೂ ಹಬ್ಬಗಳು ಎರಡೆರಡು ದಿನ ಬಂದು ನಮಗೆ ಎಂದು ಆಚರಿಸುವುದೆಂಬ ಗೊಂದಲವೇಳುತ್ತದೆ. ನೀವೇನ್ಮಾಡ್ತೀರಾ?

ಯಾರ ಮನೆಯಲ್ಲಿ ರುಚಿಕರವಾದ ಅಡುಗೆ ಮಾಡುವರೋ ಅವರ ಮನೆಗೆ ಅಂದಂದು ಹೋಗುವೆ.

ಅನಸೂಯಾ ಟಿ, ಕೇದಿಗೆಮನೆ

ಬುದ್ಧಿವಂತರಾಗಲು ಏನು ಮಾಡಬೇಕು ರಾಮ್?

ನಮಗಿಂತ ದಡ್ಡರ ಜೊತೆ ಸೇರಿದರಾಯ್ತು!

ಪಿ.ಜೆ. ರಾಘವೇಂದ್ರ, ಮೈಸೂರು

ಬೀರಬಲ್ಲನಂತಹ ಮಂತ್ರಿಗಳು ಈಗ ಏಕಿಲ್ಲ?



ಅಂತಹ ಸವಾಲುಗಳನ್ನು ಬೀರಬಲ್ಲಂತಹ ದೊರೆಗಳಿಲ್ಲವಾದ್ದರಿಂದ.

ಜೆ. ಪ್ರದೀಪಕುಮಾರ್, ಹೂವಿನಹಡಗಲಿ

ಒಳ್ಳೆಯತನಕ್ಕೆ ಬೆಲೆಯಿಲ್ಲವೆಂದು ಗೊತ್ತಿದ್ದರೂ ಕೆಲವರು ಒಳ್ಳೆಯತನದಲ್ಲೇ ಬದುಕುತ್ತಿದ್ದಾರಲ್ಲ?

ಫ್ಲೋರಿಕಲ್ಚರ್ ಡಿಪಾರ್ಟ್‌ಮೆಂಟಿನಲ್ಲಿ ಕೆಲಸ ಮಾಡಿದವರಿಗೆ ಸ್ಯಾನಿಟರಿ ಡಿಪಾರ್ಟ್‌ಮೆಂಟ್ ಒಗ್ಗುವುದಿಲ್ಲವಂತೆ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

ಪುರುಷರ ತಲೆ ಬೋಳಾದಂತೆ ಮಹಿಳೆಯರ ತಲೆ ಬೋಳಾಗುವುದಿಲ್ಲ. ಏಕೆ?

ಪುರುಷರು ಸ್ತ್ರೀಯರ ವಿಷಯದಲ್ಲಿ ತಲೆ ಕೆಡಿಸಿಕೊಂಡಷ್ಟು, ಸ್ತ್ರೀ ಪುರುಷರ ಬಗ್ಗೆ ಕೆಡಿಸಿಕೊಳ್ಳಳಂತೆ.

■ ರಾಮ್